# ತತ್ವಪದಗಳಲ್ಲಿನ ಪಾರಂಪರಿಕತೆ ಹಾಗೂ ಆಧುನಿಕತೆ

ಶೈಲಜ ವಿ.

ಸಂಶೋಧನಾರ್ಥಿ, ಬೆಂಗಳೂರು ಉತ್ತರ ವಿ.ವಿ., ತಮಟ, ಕೋಲಾರ.

DOI: https://doi.org/10.5281/zenodo.15795800

## ABSTRACT:

ತತ್ವಪದ ಸಾಹಿತ್ಯವು ಅನುಭಾವಿಕ ಅಥವಾ ಆಧ್ಯಾತ್ಮಿಕ ಎಂದು ಕರೆಯುವ ಗುರು ಪರಂಪರೆಗೆ ಒಳಗಾಗಿರುವ ಸಾಹಿತ್ಯ. ತತ್ವಪದಗಳು ಆತ್ಮ ಮತ್ತು ಪರಮಾತ್ಮರ ನಡುವಿನ ಸಂಬಂಧವನ್ನು ಪ್ರತಿಪಾದಿಸುತ್ತವೆ. ತತ್ವಪದ ಸಾಹಿತ್ಯವು ಶರಣರು, ದಾಸರು, ಸೂಫಿಗಳು, ಜೈನ ಧರ್ಮೀಯರು, ಆರೂಢರು, ಅವಧೂತರು, ಸಿದ್ಧರು, ನಾಥರು, ಪಾಂಚಾಳರು ಮುಂತಾದ ಅನೇಕ ಅನುಭಾವ ಪಂಥದ ಸಾಧಕರಿಂದ ರಚನೆಯಾದ ಗೇಯಾತ್ಮಕ ಗೀತೆಗಳಾಗಿವೆ. ಜನಸಮುದಾಯಗಳಲ್ಲಿ ಮೌಖಿಕ ಪರಂಪರೆಯ ಮೂಲಕ ನೆಲೆ ನಿಂತಿವೆ. ಇದು ಭಕ್ತಿ ಸಾಹಿತ್ಯ ಅಲ್ಲ, ದೈವ ಮಾರ್ಗದ ಸಾಹಿತ್ಯವೂ ಅಲ್ಲ. ಕೇವಲ ಹಾಡುವ, ಹಾಡಿಕೊಳ್ಳುವ ಸಾಹಿತ್ಯವೂ ಅಲ್ಲ. ಇದು ಸಾಧಕ ಸಾಹಿತ್ಯ.

ಸಮಾಜ ಮತ್ತು ತನ್ನ ನಡುವೆ ಸಾಮರಸ್ಯತೆ ತಂದು ಕೊಡುತ್ತದೆ. ನಿತ್ಯ ಜೀವನದ ಅಂತಃಸತ್ವ ಎತ್ತಿ ತೋರುತ್ತದೆ. ಸ್ವರ ವಚನ, ಭಜನೆ, ತತ್ವ ಪದ ಎನ್ನುತ್ತೇವೆ. ಇದು ನಡುರಾತ್ರಿಯ ಕಾವ್ಯ. ಲೋಕ ಮಲಗಿರುವಾಗ ತತ್ವಪದಕಾರರು ಎಚ್ಚರವಾಗಿರುತ್ತಾರೆ. ಲೋಕವನ್ನು ಅರಿಯಲು ಬೇಕಾದ ವಿವೇಕ, ಭಕ್ತಿ, ಜ್ಞಾನ ರೂಪದ ಗುರು ಒಳಗಿನ ಅರಿವಿನ ಗುರುವಾಗಿರುತ್ತಾನೆ. ಸಾಮಾಜಿಕವಾಗಿ ಕ್ಷೋಭೆಗಳಿಂದ ತಲ್ಲಣಗೊಳ್ಳುತ್ತಿರುವ ಇಂದಿನ ಸಂದರ್ಭಗಳಲ್ಲಿ ಅವರ ನೀತಿ ಬೋಧನೆಗಳು, ಸಾಮಾಜಿಕ ವಿಡಂಬನೆಗಳು ಹಾಗೂ ಅರಿವಿನ ತತ್ವಗಳು ನಿಜಕ್ಕೂ ಪರಿಣಾಮಕಾರಿಯಾಗಿವೆ.

## KEYWORDS:

ಮೈಸ್ಟಿಸಿಸಂ, ಹದಗೊಂಡ ಪದ, ಪರಮಾತ್ಮ, ತತ್ವಪದ, ಆಧುನಿಕತೆ, ಪರಂಪರೆ.

ಅನುಭಾವಿಕ ನೆಲೆಯಲ್ಲಿ ಒಡಮೂಡಿದ ಒಂದು ರೂಪವೇ ತತ್ವಪದ. ಕನ್ನಡದಲ್ಲಿ ತತ್ವಪದಗಳು ಸುಮಾರು 15ನೇ ಶತಮಾನದಲ್ಲಿ ಪ್ರಚಾರಕ್ಕೆ ಬಂದಿದೆ. ಇದು ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯಗಳೆರಡರ ಗುಣಲಕ್ಷಣಗಳನ್ನು ಒಳಗೊಂಡಿದೆ. ವಿವಿಧ ಧರ್ಮಗಳ ಅನುಭಾವ ಸಾಹಿತ್ಯದ ಅಭಿವ್ಯಕ್ತಿಯಾದ ಹಾಗೂ ಮಧ್ಯಕಾಲದ ಸಾಹಿತ್ಯ ಘಟ್ಟದಲ್ಲಿ ರಚಿತವಾದ ತತ್ವಪದ ಸಾಹಿತ್ಯವು ಹಲವು ಬಗೆಯ ಅನನ್ಯತೆಯನ್ನು ಬೆಳೆಸಿದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಚನ ಸಾಹಿತ್ಯ, ದಾಸ ಸಾಹಿತ್ಯ ಹಾಗೂ ಸೂಫಿ ಸಾಹಿತ್ಯ ಪಂಥಗಳು ಭಕ್ತಿ ಪ್ರಧಾನವಾದ ಸಾಹಿತ್ಯವಾಗಿರದೆ ಸಾಮಾಜಿಕ ಕಳಕಳಿಯ ಆಶಯಗಳನ್ನು ಹೊಂದಿದ್ದು, ಜನಪರವಾಗಿದ್ದವು. ಇದೇ ರೀತಿಯ ಸಮುದಾಯ, ಸಂವೇದನೆಯ ಅನುಭಾವ ಸಾಹಿತ್ಯದ ಮತ್ತೊಂದು ಪ್ರಕಾರವೆಂದರೆ ತತ್ವಪದ ಸಾಹಿತ್ಯ. ಇದು ಸಾಹಿತ್ಯ ಪ್ರಕಾರ ಮಾತ್ರವಲ್ಲದೆ ಸಾಂಸ್ಕೃತಿಕ ಪ್ರತಿನಿಧೀಕರಣವೂ ಹೌದು. ಜನಸಾಮಾನ್ಯರ ಬದುಕಿನೊಂದಿಗೆ ಬೆಸೆದಿರುವ ಇವು ಆಚರಣೆಯನ್ನು ಪಡೆದಿವೆ. ತತ್ವ ಮತ್ತು ಪದಗಳೆಂಬ ಎರಡು ಪದಗಳಿಂದ ರಚನೆಯಾಗಿದೆ. ತತ್ವ ಮೂಲತಃ ಸಂಸ್ಕೃತ ಶಬ್ದ. ತತ್ವ ಎಂದರೆ ಭಾವ ಸ್ವರೂಪ, ನಿಜ ಸ್ಥಿತಿ, ಪರಮಾತ್ಮ, ಸಿದ್ಧಾಂತ, ಸತ್ಯದ ತಿಳುವಳಿಕೆ, ದೈವ ಜ್ಞಾನ, ಬ್ರಹ್ಮ ಜ್ಞಾನ, ವಸ್ತು ಸ್ಥಿತಿಯ ಅರಿವು ಎಂಬ ಅರ್ಥಗಳಿವೆ. ಹಾಗೆಯೇ ಪದ ಎಂಬುದು ಕನ್ನಡ ದೇಶೀಯ ಶಬ್ಧ, ಪದ ಎಂದರೆ 'ಹಾಡು', 'ಹದಗೊಂಡ ಶಬ್ದ' ಎಂಬ ಅರ್ಥವಿದೆ. ಒಟ್ಟಾರೆ ತತ್ವ ಪದ ಎಂದರೆ ಭಾವ ಸ್ವರೂಪದ ನಿಜ ಸ್ಥಿತಿಯ ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಯಾಗಿದೆ. ಒಟ್ಟಾರೆಯಾಗಿ ಲೌಕಿಕ ವ್ಯವಹಾರಕ್ಕೆ ಹೊರತಾದ ನೈತಿಕತೆಯನ್ನು ಒಳಗೊಂಡ ಮಾತನ್ನು ತತ್ವ ಎಂದು ಅದನ್ನು ಪರಿಣಾಮಕಾರಿಯಾಗಿ ಪ್ರಕಟಿಸುವ ಶೈಲಿಗೆ ತತ್ವಪದ ಎಂದು ಕರೆಯಲಾಗಿದೆ.

ಆತ್ಮ ಮತ್ತು ಪರಮಾತ್ಮರ ನಡುವಿನ ಸಂಬಂಧವನ್ನು ಇವು ಪ್ರತಿಪಾದಿಸುತ್ತವೆ. ಆಧ್ಯಾತ್ಮಿಕತೆಯಲ್ಲಿ ತೊಡಗಿರುವ ವ್ಯಕ್ತಿಯ ಅಂತರಂಗ ಶುದ್ಧಿ, ಧರ್ಮ ನಿಷ್ಠೆ, ಜ್ಞಾನ, ವೈರಾಗ್ಯ, ಶ್ರದ್ಧೆ, ಭಕ್ತಿ, ಭಾವ ಶುದ್ಧಿ, ನೀತಿ ಬೋಧೆ ಮುಂತಾದ ಭಾವಗಳನ್ನು ವ್ಯಕ್ತಪಡಿಸುವ ಮಾರ್ಗವೇ ತತ್ವಪದಗಳಾಗಿವೆ. ತತ್ವ ಪದಗಳನ್ನು ಸ್ವರೂಪದ ದೃಷ್ಟಿಯಿಂದ ಹಾಡುಗಳೆಂದು ವಸ್ತುವಿನ ದೃಷ್ಟಿಯಿಂದ ತತ್ವಪದವೆಂದು ಉದ್ದೇಶದ ದೃಷ್ಟಿಯಿಂದ ಕೈವಲ್ಯ ಪದವೆಂದು ಕರೆಯಬಹುದಾಗಿದೆ. ಇವುಗಳನ್ನು ಭಜನೆ ಪದ, ಅನುಭಾವ ಪದ ಮತ್ತು ಸ್ವರ ವಚನಗಳು ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಸಂತ ಪರಂಪರೆಯಲ್ಲಿ ತತ್ವ ಪದಗಳನ್ನು ಕಾರಣಿಕ ಎನ್ನುತ್ತಾರೆ. ತತ್ವ ಪದಗಳನ್ನು ಇತ್ತೀಚಿಗೆ Mysticism ಪದದೊಂದಿಗೆ ಸಮೀಕರಿಸಲಾಗಿದೆ. ತತ್ವ ಪದಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಕೈವಲ್ಯ ಸಾಹಿತ್ಯ ಎಂದು ಗುರುತಿಸಲಾಗಿದೆ. ತತ್ವಪದ ರಚನೆಕಾರರನ್ನು ಮಾತ್ರ ಅನುಭಾವಿ ಕವಿಗಳೆಂದು ಕರೆಯಲಾಗಿದೆ. ಶಿಷ್ಟ ಸಾಹಿತ್ಯಕ್ಕಿಂತ

ಮೌಖಿಕ ಪರಂಪರೆಯೇ ತತ್ವ ಶಾಸ್ತ್ರದ ಜೀವಂತಿಕೆಯಾಗಿದೆ. ತತ್ವ ಪದಕಾರರು ತಮ್ಮ ಬದುಕಿನಲ್ಲಿ ತಾವು ಅನುಭವಿಸಿದ ಸುಖ-ದುಃಖ, ಅಪಮಾನ ಹಾಗೂ ಅನುಭಾವದ ವಿವಿಧ ನೆಲೆಗಳನ್ನು ಪದಗಳ ಮೂಲಕ ಅಭಿವ್ಯಕ್ತಿಸುತ್ತಾರೆ. ತಾವು ವಾಸಿಸುವ ಪ್ರದೇಶ ಮತ್ತು ಸುತ್ತ ಮುತ್ತಲಿನ ಪ್ರದೇಶಗಳನ್ನು ಸಾಂಸ್ಕೃತಿಕ ರಾಯಭಾರಿಗಳಾಗಿರುತ್ತಾರೆ. ಸಮಾಜದಲ್ಲಿನ ಅಸಮಾನತೆ ಕ್ರೌರ್ಯ, ಶೋಷಣೆ, ಜಾತಿ ಪದ್ಧತಿ ಮುಂತಾದ ಹೀನ ಕೃತ್ಯಗಳನ್ನು ಖಂಡಿಸುತ್ತಾರೆ. ಹೀಗೆ ತತ್ವ ಪದಕಾರರು ಕೇವಲ ಅನುಭಾವಕಷ್ಟೇ ಸೀಮಿತವಲ್ಲದೆ, ಸಾಮಾಜಿಕ ಸುಧಾರಣೆಗೆ ತುಡಿಯುತ್ತಾರೆ. ತತ್ವ ಸಾಹಿತ್ಯ ಕೇವಲ ಕನ್ನಡದಲ್ಲಿ ಮಾತ್ರವಲ್ಲದೆ ಇತರೆ ಭಾಷೆಗಳ ಸಾಹಿತ್ಯದಲ್ಲೂ ಮೂಡಿ ಬಂದಿದೆ. ಉದಾಹರಣೆಗೆ ತಲುಗಿನಲ್ಲಿ ತತ್ವಾಲು, ಬಂಗಾಳಿಯ ಬಾಉಲ್ (ಆಧ್ಯಾತ್ಮಿಕ ಹಾಡುಗಳು) ಸಾಮರಸ್ಯದ ಪ್ರತೀಕವಾಗಿ ತತ್ವ ಪದ ಸಾಹಿತ್ಯವು ಮೂಡಿಬಂದಿದೆ. ಇಲ್ಲಿ ಹಿಂದೂ ತತ್ವ ಪದಕಾರರಿಗೆ ಮುಸ್ಲಿಂ ಗುರುಗಳು, ಮುಸ್ಲೀಂ ತತ್ವ ಪದಕಾರರಿಗೆ ಹಿಂದೂ ಗುರುಗಳು ಇರುವುದನ್ನು ನಾವು ಕಾಣಬಹುದು. ಉದಾಹರಣೆಗೆ ಶಿಶುನಾಳ ಶರೀಫರಿಗೆ ಗುರು ಗೋವಿಂದ ಭಟ್ಟರು ಗುರುವಾಗಿದ್ದರೆ, ನಾಗಲಿಂಗ ಸ್ವಾಮಿಗಳಿಗೆ ಶ್ರೀ ಹುಸೇನ ಪೀರರು ಗುರುವಾಗಿದ್ದರು. ತತ್ವ ಪದ ಸಾಹಿತ್ಯವು ಲಿಖಿತ ಮತ್ತು ಅಲಿಖಿತ ಪರಂಪರೆಗಳೆರಡರಲ್ಲೂ ರಚನೆಯಾಗಿದ್ದರೂ ಸಹ ಪ್ರಚಾರವಾದದ್ದು ಮೌಖಿಕ ಪರಂಪರೆಯಿಂದಲೇ. ಪಾರಂಪರಿಕ ನೆಲೆಯಲ್ಲಿ ಅನುಭಾವವನ್ನು ಹಾಡಿನ ಮೂಲಕ ಕಟ್ಟಿ ಹಾಕಿದರೆ ಶಿಷ್ಟ ಪರಂಪರೆಯಲ್ಲಿ ದಾಖಲುಗೊಂಡ ತತ್ವ ಪದಗಳನ್ನು ಹಲವು ಹವ್ಯಾಸಿ ಹಾಡುಗಾರರು ಮತ್ತು ಭಜನಾ ಮಂಡಳಿಯ ಹಾಡುಗಾರರು ಹಾಡಿನ ಮೂಲಕ ಜನ ಮಾನಸವನ್ನು ತಲುಪಿದ್ದಾರೆ. ಅನುಭಾವಿಯೊಬ್ಬನಿಂದ ರಚಿತವಾದರೂ ಜನಪದ ಸಂವೇದನೆಗಳ ಫಲವಾಗಿ ಸಮುದಾಯಿಕ ರಚನೆಗಳು ಹೊರ ಹೊಮ್ಮಿವೆ. ತತ್ವಪದಕಾರರು ಯಾವುದೇ ಮಾರ್ಗ ಸಾಹಿತ್ಯ ಪ್ರಕಾರವನ್ನು ಅನುಸರಿಸಿದವರಲ್ಲ. ಎಲ್ಲ ರೀತಿಯ ಸ್ಥಾಪಿತ ಮಾದರಿಗಳನ್ನು ಮುರಿಯುವುದೇ ಅವರ ಪರಂಪರೆಯಾಗಿದೆ.

ಪಾರಂಪರಿಕ ತತ್ವ ಪದಗಳು ನಮ್ಮ ಶ್ರದ್ಧೆ, ಸಂಸ್ಕೃತಿ ಮತ್ತು ಜೀವನ ಮೌಲ್ಯಗಳಿಗೆ ಆಧಾರವಾಗಿವೆ. ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ವೇದ, ಉಪನಿಷತ್ತು, ಭಗವದ್ಗೀತೆ, ತತ್ವಶಾಸ್ತ್ರಗಳು ಇತ್ಯಾದಿಗಳಿಂದ ಹಲವಾರು ತತ್ವ ಪದಗಳು ರೂಪುಗೊಂಡಿವೆ. ಧರ್ಮ, ಅಹಿಂಸೆ, ಸತ್ಯ, ಮೋಕ್ಷ, ಕರ್ತವ್ಯ, ಸಜ್ಜನತೆಗಳ ಮೇಲೆ ಕೇಂದ್ರವಾಗಿ ರಚನೆಗಳಾಗುತ್ತಿದ್ದವು.

ಸಾಮಾಜಿಕ ವಿಡಂಬನೆ:

**ಸಬ್ ಕಹತೇ ಈಶ್ವರ್ ಅಲ್ಲಾ**
**ಇದರ ಭೇದ ಯಾರಿಗೆ ತಿಳಿದಿಲ್ಲ**[1]

ಈ ತತ್ವ ಪದದಲ್ಲಿ ಈಶ್ವರ ಮತ್ತು ಅಲ್ಲಾ ಇಬ್ಬರೂ ಒಂದೇ ಎಂದು

ಸಾರಲಾಗಿದೆ. ಭಾಷೆ ಮತ್ತು ಧರ್ಮದ ನಿರ್ಬಂಧವಿಲ್ಲದೇ ಒಂದು ಸಾಲು ಉರ್ದುವಿನಲ್ಲಿ ಇನ್ನೊಂದು ಸಾಲು ಕನ್ನಡದಲ್ಲಿ ಇದೆ.

ಪ್ರತಿಯೊಂದು ಸಾಹಿತ್ಯವು ಜನರನ್ನು ಪರಿಣಾಮಕಾರಿಯಾಗಿ ತಲುಪಲು ತಂತ್ರ ಮತ್ತು ಅಭಿವ್ಯಕ್ತಿಯನ್ನು ನಿರ್ವಹಿಸುತ್ತದೆ.

**ಕಳಕೋ ಮಲೀನ ನೀನೆಲೋ, ನಿನ್ನೋಳಗೆ ನೀ**
**ತಿಳಿಕೋ ಶ್ರೀ ಗುರು ಮುಖದಿ**[2]

ಅಪ್ಪ, ಅಕ್ಕ, ಅಣ್ಣ ಮುಂತಾದ ಸಂಬೋಧನೆಗಳು ಆತ್ಮೀಯ ಭಾವವನ್ನು ಮೂಡಿಸುವುದರ ಜೊತೆಗೆ ತತ್ವಪದಕಾರರ ಆಶಯ ಈಡೇರಿಸುತ್ತಿದ್ದರು. ಒಗಟು–ನುಡಿಗಟ್ಟುಗಳನ್ನೊಳಗೊಂಡ ಕಡಕೋಳ ಮಡಿವಾಳಪ್ಪನವರ ಸಾಹಿತ್ಯವು ಅದ್ಭುತವಾದ ದೇಸಿ ನುಡಿಯ ಭಂಡಾರವನ್ನೇ ನೋಡಬಹುದು.

**ಕೊಂದವರಿಗೆ ಕೊಲಿ ತಪ್ಪದು, ನೀತಿ ಇಲ್ಲದೆ ಮಾತ ಹೇಳಿ**
**ನೂಲಿಲಿ ಕುತ್ತಿಗೆ ಕೊಯ್ಯುವಂಗ.**

ವಸಾಹತು ಶಾಹಿಯ ಫಲವಾಗಿ ಭಾರತವನ್ನು ಪ್ರವೇಶಿಸಿದ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಆಸ್ಪತ್ರೆ, ಕೈಗಾರಿಕೆ ಇತ್ಯಾದಿಗಳ ಬಗ್ಗೆ ಕುತೂಹಲವಾಗುವಂತೆ ಅವುಗಳನ್ನು ಆಧ್ಯಾತ್ಮದ ಪ್ರತಿಮೆಯಾಗಿ ಬಳಸಿಕೊಂಡಿದ್ದಾರೆ. ಮಾನವ ಹಕ್ಕುಗಳು, ಪ್ರಜಾಸತ್ತಾತ್ಮಕತೆ ಮುಂತಾದ ಹೊಸ ತತ್ವಗಳ ಒಳಗೊಳ್ಳುವಿಕೆ, ಹಳೆಯ ಮೌಲ್ಯಗಳಿಗೆ ಹೊಸ ಅರ್ಥ ನೀಡುವುದು ಹಾಗೂ ಅವುಗಳನ್ನು ಯುಕ್ತಿಯ ಪ್ರಕಾರ ಮೌಲ್ಯಮಾಪನ ಮಾಡುವುದು ಆಧುನಿಕತೆಯ ಲಕ್ಷಣವಾಗಿದೆ. ಜಾಗತೀಕರಣ, ಸ್ತ್ರೀ ಮುಕ್ತಿ, ಪರಿಸರ ಸಂರಕ್ಷಣೆ ಮುಂತಾದ ನವೀನ ವಿಷಯಗಳನ್ನು ಒಳಗೊಂಡಿದೆ.

**ಎಲ್ಲರೊಡನೆ ವೈರವಿಲ್ಲದೆ ಕೂರ್ಪುದೆ ಚಂದ ಮಾತಲ್ಲಣಿಸದೆ ನೀತಿಯಲ್ಲಿರಲಾರ್ಪುದೆ ಚಂದಮಾಮ**
**– ನಿಜ ಗುಣ ಶಿವಯೋಗಿ**

**ಈ ಊರ ಒಳಗಿಷ್ಟು ಉತ್ಪಾತವೇನೋ ಧುರಿತ ಸಂಹಾರ ನಾರೇಯಣ ಹರಿಯೇ – ಕೈವಾರ ನಾರೇಯಣ**

**ಒಂದು ಹೆಣಕ್ಕೆ ಎರಡು ಹೆಣವು ಕುಣಿವುದ್ಯಾತಕೆ**
**ಮುಂದುಗಾಣದಾಗಿ ತನ್ನೋಳ ದಣಿವುದ್ಯಾತಕೆ – ಶಿಶುನಾಳ ಶರೀಫ**

ಈ ಮೇಲಿನ ತತ್ವಪದಗಳ ಸಾಲುಗಳನ್ನು ಗಮನಿಸಿದಾಗ ಪರಸ್ಪರ ಕೋಮುಗಲಭೆ, ಯುದ್ಧ, ಅಶಾಂತಿ, ರಕ್ತಪಾತವನ್ನು ಪರಸ್ಪರ ವೈರತ್ವದ ಪರಾಕಾಷ್ಠತೆಯನ್ನು ಹಾಗೂ ವರ್ತಮಾನದ ಬಿರುಕುಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಲಾಗಿದೆ.

ಪ್ರಭುತ್ವವನ್ನು ನೇರವಾಗಿ ಎದುರುಗೊಳ್ಳದಿದ್ದರೂ ಪ್ರಭುತ್ವದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ವರ್ಗದವರನ್ನು ವಿಡಂಬಿಸಿದ್ದಾರೆ. ಸಾಂಸ್ಥಿಕ

ಧರ್ಮೀಕರಣ, ಕುಲ, ಜಾತಿ ದಾಸ್ಯವನ್ನು ಟೀಕಿಸಿದ್ದಾರೆ.

**ಹುಚ್ಚು ನಾಯಿ ಬಂದು ಕಚ್ಚುತಲಿಹೆ ತಂಗಿ**
**ಎಚ್ಚರದಲಿ ದಾರಿ ಹಿಡಿದು ನಡೆ – ಶಿಶುನಾಳ ಶರೀಫ**

ಈ ರೀತಿಯ ತತ್ವ ಪದಗಳನ್ನು ರಚಿಸಿ ಸ್ತ್ರೀ ಕುಲಕ್ಕೆ ಕಿವಿ ಮಾತು ಹೇಳಿ ಸನ್ಮಾರ್ಗವನ್ನು ಆಯ್ದು ಮುನ್ನಡೆಯುವಂತೆ ತಿಳಿಸುತ್ತಾರೆ.

ಲೋಕವನ್ನು ಅರಿಯಲು ಬೇಕಾದ ವಿವೇಕ ಗುರು ಮಾರ್ಗ ಒಳಗಿನ ಅರಿವಿನ ಗುರು, ಜೀವ ಮತ್ತು ದೇಹದ ಸಂಬಂಧ, ಹಾಗೂ ದೇಹ ಸಾಧನವೂ ಹೌದು, ತೊಡಕು ಕೂಡ ಹೌದು. ಈ ಸತ್ಯವನ್ನು ಪ್ರಸ್ತುತ ಹನಿ ಟ್ರ್ಯಾಪಿಂಗ್ ಪ್ರಕರಣಗಳು ಸಾಬೀತುಗೊಳಿಸುತ್ತಿವೆ. ಸೋದಾಹರಣವಾಗಿ ಕೆಳಗಿನ ತತ್ವಪದವನ್ನು ಲೆಕ್ಕಿಸಬಹುದು.

ಸೋಲದಾತನೆ ವಿರತನು ಮನದೊಳಗೆ ಬಾಲೆಯರ ಸಿಂಗರವನೆ ಕಂಡು – ನಿಜಗುಣ ಶಿವಯೋಗಿ.

ಮಹಿಳಾ ತತ್ವಪದಕಾರ್ತಿಯರ ಪರಿಚಯ ಮತ್ತು ಜೀವನದ ಒಳನೋಟಗಳು ಮುನ್ನೆಲೆಗೆ ಬರಬೇಕಿವೆ. ಬಯಲಲ್ಲಿ ಇಟ್ಟ ಗಂಟಿನಂತೆ ಎಲ್ಲ ತತ್ವಪದಕಾರರ ಪದಗಳು ತಮ್ಮ ಜಿಲ್ಲೆಗೆ ಮಾತ್ರವಲ್ಲದೆ ಇತರ ಜಿಲ್ಲೆಗಳ ಶಾಲಾ–ಕಾಲೇಜು ಪಠ್ಯಗಳಲ್ಲಿ ಮೂಡಿಬರಬೇಕಿದೆ. ದ್ಯಾಗಾಯಿ ಗುಂಡಪ್ಪ, ಮಾಧವ ಹಿಪ್ಪರಗಾ, ಸಿದ್ಧರಾಮ, ಸಾವಳಗಿ ಮಹಮ್ಮದಸಾಬ ಇತ್ಯಾದಿ ಅಲಕ್ಷಿತ ತತ್ವಪದಕಾರರು ಮುನ್ನೆಲೆಗೆ ಬರಬೇಕಿದೆ. ಮಾನವತಾವಾದಿಗಳಾದ ತತ್ವಪದಕಾರರ ನಿಲುವುಗಳು ಸಾಧಕ ಸಾಹಿತ್ಯವೆಂಬ ಸಿದ್ಧಾಂತವಾಗಿ ರೂಪುಗೊಳ್ಳಬೇಕಾಗಿದೆ.

ಪರಂಪರೆ ಮತ್ತು ಆಧುನೀಕರಣ ಪರಸ್ಪರ ಸಮ್ಮಿಳಿತವಾಗಿರುವ ನಿಟ್ಟಿನಲ್ಲಿ ಎರಡನ್ನು ಸಮನ್ವಯಗೊಳಿಸಿದಾಗ ತತ್ವಪದಗಳು ಸದಾಕಾಲಿಕ ಜೀವಂತತೆಯನ್ನು ಪಡೆಯುತ್ತವೆ. ಜೀವನದ ತತ್ವವನ್ನು ಧರ್ಮದ ಅಡಿಬರಹವನ್ನು ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಸರಳ ಭಾಷೆಯಲ್ಲಿ ಜನ ಸಾಮಾನ್ಯರಿಗೆ ತಲುಪಿಸಲು ಪ್ರಯತ್ನಿಸುತ್ತವೆ. ಮುಕ್ತ ಚಿಂತನೆ ವಿವೇಕ ಪೂರ್ಣ ದೃಷ್ಟಿಕೋನ ವೈಜ್ಞಾನಿಕ ಮನೋಭಾವನೆ ಇಲ್ಲಿ ಮುಖ್ಯವಾಗುತ್ತವೆ. ಆಧುನೀಕರಣದ ಛಾಯೆಯಡಿಯಲ್ಲಿ ಇಂದು ಸಿ.ಡಿ.ಗಳ ರೂಪದಲ್ಲಿ ತತ್ವಪದಗಳು ಪ್ರಸಾರ ಹೊಂದುತ್ತಿದ್ದು, ಗ್ರಾಮೀಣ ಪ್ರದೇಶಿಗರಿಗೆ ಮನರಂಜನೆಯ ಜೊತೆಗೆ ನೈತಿಕ ಮಾರ್ಗದರ್ಶನವನ್ನು ನೀಡುತ್ತಿವೆ.

## ಕೊನೆ ಟಿಪ್ಪಣಿಗಳು:

1. ಪ್ರಭು ಖಾನಾಪುರ (ಸಂ), (1998), ಮುಸ್ಲಿಂ ತತ್ವಪದಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.ಸಂ. 1
2. ಶಾಂತರಸ (ಪ್ರ.ಸಂ.), (2000), ತತ್ವಪದಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.ಸಂ. 130–204.

## ಪರಾಮರ್ಶನ ಗ್ರಂಥಗಳು:


1. ಪ್ರಭು ಖಾನಾಪುರ (ಸಂ), (1998), ಮುಸ್ಲಿಂ ತತ್ವಪದಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ಶಾಂತರಸ (ಪ್ರ.ಸಂ.), (2000), ತತ್ವಪದಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಬಸವರಾಜ ಸಭರದ (ಸಂ.), (2000), ಹೈದರಾಬಾದ್ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.